**ಹಿರಿಯ ಸಿವಿಲ್ ನ್ಯಾಯಾಧೀಶರ ಮತ್ತು ಜೆ ಎಂ ಎಫ್ ಸಿ ರವರ ನ್ಯಾಯಾಲಯ,**

**ತಿ. ನರಸೀಪುರ.**

**ಸಿ ಸಿ ಸಂಖ್ಯೆ: 475/2025**

**ದೋಷಾರೋಪಣೆ**

ಶ್ರೀಮತಿ ಪರ್ವೀನ್ ಎ. ಬಂಕಾಪುರ ಬಿ.ಕಾಂ., ಎಲ್.ಎಲ್.ಬಿ., ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ, ತಿ ನರಸೀಪುರ ಆದ ನಾನು

1. ಇರ್ಫಾನ್ ಪಾಷ ಬಿನ್ ಲೇ ಸೈಯದ್ ರಸೂಲ್
   35 ವರ್ಷ.

2. ಅಬ್ದುಲ್ ಲತೀಫ್ ಬಿನ್ ಲೇ ಅಬ್ದುಲ್ ರೆಹಮಾನ್
   60 ವರ್ಷ.

ಇಬ್ಬರ ವಾಸಃ ಕಿರುಗಾವಲು ಗ್ರಾಮ,
ಮಳವಳ್ಳಿ ತಾಲ್ಲೂಕು, ಮಂಡ್ಯ ಜಿಲ್ಲೆ.

ಎಂಬ ಆರೋಪಿತರಾದ ನಿಮ್ಮ ಮೇಲೆ ಈ ಕೆಳಗಿನಂತೆ ಹೊರಿಸುವ ದೋಷಾರೋಪವೇನೆಂದರೆ :–

ಮೊದಲನೆಯದಾಗಿ, 1 ನೇ ಆರೋಪಿತರಾದ ನೀವು ಚಾಸಾ–1/ಜುಹಾಬಾನು ರವರನ್ನು ದಿನಾಂಕ 06.12.2021 ರಂದು ಬನ್ನೂರಿನ ಗೋಲ್ಡನ್ ಪ್ಯಾಲೇಸ್‌ನಲ್ಲಿ ವಿವಾಹವಾಗಿದ್ದು, ನಂತರ ಅವರು ನಿಮ್ಮ ಮನೆಗೆ ಬಂದಾಗ, 1 ಮತ್ತು 2 ನೇ ಆರೋಪಿಯಾದ ನೀವು ಚಾಸಾ–1 ರವರ ಮೇಲೆ ವಿನಾ ಕಾರಣ ಜಗಳ ತೆಗೆದು ಬೇರೆ ಹುಡುಗಿಯನ್ನು ಮದುವೆಯಾಗಬೇಕಿತ್ತು ಹೆಚ್ಚಿನ ವರದಕ್ಷಿಣೆ ಸಿಗುತ್ತಿತ್ತು ಎಂದು ಮಾನಸಿಕ ಹಿಂಸೆ ನೀಡಿ, ದಿನಾಂಕ 20.11.2024 ರಂದು ಬೆಳಗ್ಗೆ 11.00 ಗಂಟೆ ಸಮಯದಲ್ಲಿ, ಚಾಸಾ–1 ರವರು ಬನ್ನೂರಿನ ಪಟ್ಟಣದ ಮನೆಯಲ್ಲಿ ಇದ್ದಾಗ, 1 ನೇ ಆರೋಪಿಯಾದ ನೀವು ಅಲ್ಲಿಗೆ ಬಂದು ಚಾಸಾ–1 ರಿಂದ

3 ರವರೊಂದಿಗೆ ಗಲಾಟೆ ಮಾಡಿ, ಕೈಗಳಿಂದ ಚಾಸಾ–1 ರವರ ಮೈಕೈಗೆ ಹೊಡೆದು, ಚಾಸಾ–1 ರಿಂದ 3 ರವರನ್ನು ಉದ್ದೇಶಿಸಿ "ಬೇರ್ವಸಿ ಲೋಪರ್ಗಳಾ" ಎಂದು ಅವ್ಯಾಚ್ಯ ಶಬ್ದಗಳಿಂದ ಬೈದು, ಕೊಲೆ ಮಾಡುವುದಾಗಿ ಕೊಲೆ ಬೆದರಿಕೆ ಹಾಕಿ ಚಾಸಾ–1 ರವರಿಗೆ ದೈಹಿಕ ಮತ್ತು ಮಾನಸಿಕ ಕಿರುಕುಳ ನೀಡುವ ಮೂಲಕ ಭಾರತೀಯ ನ್ಯಾಯಾ ಸಂಹಿತೆ ಕಲಂ. 85 ಸಹ ಕಲಂ 3(5) ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದು, ಅದು ನನ್ನ ಸಂಜ್ಞೆಯಲ್ಲಿ ಬರುತ್ತದೆ.

ಎರಡನೆಯದಾಗಿ, 1 ನೇ ಆರೋಪಿಯಾದ ನೀವು ಚಾಸಾ–1 ರಿಂದ 3 ರವರಿಗೆ ಈ ಮೇಲೆ ಹೇಳಿದಂತೆ “ಬೇರ್ವಸಿ ಲೋಪರ್ಗಳಾ" ಎಂಬ ಅವಾಚ್ಯ ಶಬ್ದಗಳಿಂದ ಬೈದು ಸಾರ್ವಜನಿಕ ಶಾಂತಿ ಭಂಗಪಡಿಸುವ ಮೂಲಕ ಭಾರತೀಯ ನ್ಯಾಯಾ ಸಂಹಿತೆ ಕಲಂ.352 ಸಹ ಕಲಂ 3(5) ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದು, ಅದು ನನ್ನ ಸಂಜ್ಞೆಯಲ್ಲಿ ಬರುತ್ತದೆ.

ಮೂರನೇಯದಾಗಿ, 1 ನೇ ಆರೋಪಿಯಾದ ನೀವು ಚಾಸಾ–1 ರವರಿಗೆ ಈ ಮೇಲೆ ಹೇಳಿದಂತೆ ಹಲ್ಲೆ ಮಾಡಿ ಸಾಮಾನ್ಯ ಸ್ವರೂಪದ ನೋವುಂಟು ಮಾಡುವ ಮೂಲಕ ಭಾರತೀಯ ನ್ಯಾಯಾ ಸಂಹಿತೆ ಕಲಂ.115(2) ಸಹ ಕಲಂ 3(5) ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದು, ಅದು ನನ್ನ ಸಂಜ್ಞೆಯಲ್ಲಿ ಬರುತ್ತದೆ.

ನಾಲ್ಕನೇಯದಾಗಿ, 1 ನೇ ಆರೋಪಿಯಾದ ನೀವು ಚಾಸಾ–1 ರಿಂದ 3 ರವರಿಗೆ ಕೊಲೆ ಮಾಡುವುದಾಗಿ ಪ್ರಾಣ ಬೆದರಿಕೆ ಉಂಟು ಮಾಡುವ ಮೂಲಕ ಭಾರತೀಯ ನ್ಯಾಯಾ ಸಂಹಿತೆ ಕಲಂ.351(2)(3) ಸಹ ಕಲಂ 3(5) ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದು, ಅದು ನನ್ನ ಸಂಜ್ಞೆಯಲ್ಲಿ ಬರುತ್ತದೆ.

ಐದನೇಯದಾಗಿ ಆರೋಪಿತರಾದ ನಿಮ್ಮ ಮತ್ತು ಚಾಸಾ-1ರವರ ವಿವಾಹದ ಮಾತುಕತೆಯ ವೇಳೆಗೆ 1 ಮತ್ತು 2 ನೇ ಆರೋಪಿತರಾದ ನೀವು ಚಾಸಾ-1 ರವರ ಕಡೆಯಿಂದ ವರದಕ್ಷಿಣೆಯಾಗಿ 100 ಗ್ರಾಂ ಚಿನ್ನ ಮತ್ತು ವಿವಾಹದ ಖರ್ಚಿಗೆ 1 ಲಕ್ಷ ನಗದು ಹಣ ಕೊಡುವಂತೆ ಬೇಡಿಕೆ ಇಡುವ ಮೂಲಕ ವರದಕ್ಷಿಣೆ ನಿಷೇಧ ಕಾಯ್ದೆ ಕಲಂ 3 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದು, ಅದು ನನ್ನ ಸಂಜ್ಞೆಯಲ್ಲಿ ಬರುತ್ತದೆ.

ಆರನೇಯದಾಗಿ, 1 ನೇ ಆರೋಪಿತರಾದ ನೀವು ಚಾಸಾ-1 ರವರ ಕಡೆಯಿಂದ ವರದಕ್ಷಿಣೆಯಾಗಿ 50 ಗ್ರಾಂ ಚಿನ್ನ ಮತ್ತು 50 ಸಾವಿರ ನಗದು ಹಣ ಪಡೆಯುವ ಮೂಲಕ ವರದಕ್ಷಿಣೆ ನಿಷೇಧ ಕಾಯ್ದೆ ಕಲಂ 4 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದು, ಅದು ನನ್ನ ಸಂಜ್ಞೆಯಲ್ಲಿ ಬರುತ್ತದೆ.

ಏಳನೇಯದಾಗಿ, 1 ನೇ ಆರೋಪಿತರಾದ ನೀವು ಈ ಮೇಲೆ ಹೇಳಿದ ವರದಕ್ಷಿಣೆಯನ್ನು ಚಾಸಾ-1 ರವರಿಗೆ ವಾಪಸ್ಸು ನೀಡದೆ ನಿಮ್ಮ ಬಳಿ ಇಟ್ಟುಕೊಳ್ಳುವ ಮೂಲಕ ವರದಕ್ಷಿಣೆ ನಿಷೇಧ ಕಾಯ್ದೆ ಕಲಂ 6 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದು, ಅದು ನನ್ನ ಸಂಜ್ಞೆಯಲ್ಲಿ ಬರುತ್ತದೆ.

ನಾನು ಈ ಮೇಲಿನ ದೋಷಾರೋಪಣೆಗಳ ಮೇಲೆ ಈ ನ್ಯಾಯಾಲಯದ ವಿಚಾರಣೆಗೆ ನೀವು ಗುರಿಯಾಗಬೇಕೆಂದು ನಿರ್ದೇಶಿಸುತ್ತೇನೆ.

ಪ್ರಶ್ನೆಃ ನಿಮ್ಮ ಮೇಲೆ ಹೊರಿಸಲಾದ ದೋಷಾರೋಪಣೆ ಕೇಳಿದ್ದೀರಾ? ಅದು ನಿಮಗೆ ತಿಳಿಯಿತೇ?

ಉತ್ತರಃ 1.

2.

ಪ್ರಶ್ನೆಃ ನೀವು ಸದರಿ ದೋಷಾರೋಪವನ್ನು ಒಪ್ಪಿಕೊಳ್ಳುತೀರಾ? ಅಥವಾ ನಿಮ್ಮ ವಿರುದ್ಧ ವಿಚಾರಣೆ ನಡೆಯಬೇಕೇ?

ಉತ್ತರಃ 1.

2.

(ಮೇಲಿನ ದೋಷಾರೋಪಣೆಯನ್ನು ಆಪಾದಿತರಿಗೆ ತಿಳಿದಿರುವ ಭಾಷೆಯಲ್ಲಿ ಓದಿ, ತಿಳಿಸಿ ಹೇಳಿ ಅವರು ನೀಡಿದ ಉತ್ತರವನ್ನು ಬರೆದುಕೊಂಡಿರುವುದಾಗಿ ಈ ಮೂಲಕ ದೃಢೀಕರಿಸಲಾಗಿದೆ.)

ದಿನಾಂಕಃ 23.07.2026

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್‌ಸಿ, ಟಿ ನರಸೀಪುರ.**

**ಹಿರಿಯ ಸಿವಿಲ್ ನ್ಯಾಯಾಧೀಶರ ಮತ್ತು ಜೆ ಎಂ ಎಫ್ ಸಿ ರವರ ನ್ಯಾಯಾಲಯ, ತಿ ನರಸೀಪುರ**

**ಸಿ ಸಿ ಸಂಖ್ಯೆ 513/2024**

**ದೋಷಾರೋಪಣೆ**

1. ಅವಿನ್ ಕುಮಾರ್ ಬಿನ್ ಲೇ ಹೆಚ್ ರಮೇಶ
   **35** ವರ್ಷ.

2. ಜಯಲಕ್ಷ್ಮೀ ಕೋಂ ಲೇ ಹೆಚ್ ರಮೇಶ
   **54** ವರ್ಷ.

ಇಬ್ಬರ ವಾಸಃ ಹನಕರೆ ಗ್ರಾಮ, ಕಸಬಾ ಹೋಬಳಿ,
ಮಂಡ್ಯ ಜಿಲ್ಲೆ.

ಪ್ರಶ್ನೆಃ ನಿಮ್ಮ ಮೇಲೆ ಹೊರಿಸಲಾದ ದೋಷಾರೋಪಣೆ ಕೇಳಿದ್ದೀರಾ? ಅದು ನಿಮಗೆ ತಿಳಿಯಿತೇ?

ಉತ್ತರಃ ಹೌದು

ಪ್ರಶ್ನೆಃ ನೀವು ಸದರಿ ದೋಷಾರೋಪವನ್ನು ಒಪ್ಪಿಕೊಳ್ಳುತೀರಾ? ಅಥವಾ ನಿಮ್ಮ ವಿರುದ್ಧ ವಿಚಾರಣೆ ನಡೆಯಬೇಕೇ?

ಉತ್ತರಃ ವಿಚಾರಣೆಯಾಗಬೇಕು.

(ಮೇಲಿನ ದೋಷಾರೋಪಣೆಯನ್ನು ಆಪಾದಿತರಿಗೆ ತಿಳಿದಿರುವ ಭಾಷೆಯಲ್ಲಿ ಓದಿ, ತಿಳಿಸಿ ಹೇಳಿ ಅವರು ನೀಡಿದ ಉತ್ತರವನ್ನು ಬರೆದುಕೊಂಡಿರುವುದಾಗಿ ಈ ಮೂಲಕ ದೃಢೀಕರಿಸಲಾಗಿದೆ.)

ದಿನಾಂಕಃ 13.11.2025.

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್‌ಸಿ, ಟಿ ನರಸೀಪುರ.**